# ಐಶ್
## ಓಲ್ಡ್ ಈಸ್ ಗೋಲ್ಡ್

ಮದುವೆಯಾಗಿ ಸಂಸಾರದೊಂದಿಗೆ ಸುಖವಾಗಿದ್ದರೂ ಐಶ್ವರ್ಯ ರೈ ಸುದ್ದಿಯಲ್ಲಿರೋದು ಕಡಿಮೆಯಾಗಿಲ್ಲ. ಇಡೀ ಮನೆಯೇ 'ತಾರಾ'ಗಣ ಆಗಿರುವುದು ಅದಕ್ಕೆ ಒಂದು ಕಾರಣ ಇರಬಹುದು. ಆದರೆ ಅದಕ್ಕಿಂತ ಹೆಚ್ಚಾಗಿ ಐಶ್ವರ್ಯ ಇವತ್ತಿಗೂ ನಟನೆ ಮತ್ತು ಫ್ಯಾಷನ್ ಷೋಗಳಲ್ಲಿ ಕಾಣಿಸಿಕೊಳ್ಳುತ್ತಿರುವುದು ದೊಡ್ಡ ಕಾರಣ. ಈಗ ಇಡೀ ಬಾಲಿವುಡ್ ಕೊರೊನಾ ಲಾಕ್‌ಡೌನ್‌ನಲ್ಲಿ ಮನೆ ಸೇರಿದೆ. ಐಶ್ವರ್ಯ ಕೂಡಾ ಗಂಡ ಅಭಿಷೇಕ್ ಮತ್ತು ಮಗಳ ಜೊತೆಗೆ ಮನೆಯಲ್ಲಿ ನೆಮ್ಮದಿಯಿಂದ ಇದ್ದಾಳೆ. ಈ ಮಧ್ಯೆ ಆಕೆ ನಟಿಸಿದ ಎರಡು ದಶಕಗಳ ಹಿಂದಿನ ಸಿನಿಮಾದ ಹಾಡಿನ ವಿಡಿಯೊವೊಂದು ದೊಡ್ಡ ಸುದ್ದಿ ಮಾಡಿ ಜಾಲತಾಣಗಳಲ್ಲಿ ವೈರಲ್ ಆಗಿದೆ.

23 ವರ್ಷಗಳ ಹಿಂದೆ ಐಶ್ವರ್ಯ ನಟಿಸಿದ ಸಿನಿಮಾ 'ರಾಧೇಶ್ಯಾಮ್ ಸೀತಾರಾಮ್.' ಅರೆ.. ಈ ಹೆಸರಿನ ಸಿನಿಮಾ ನೋಡಿದ್ದೇ ನೆನಪಿಲ್ಲವಲ್ಲ..! ಎಂದು ಯಾರಾದರೂ ರಾಗ ಎಳೆದರೆ ಅದು ಸತ್ಯವೂ ಹೌದು. ಈ ಸಿನಿಮಾ ಬಿಡುಗಡೆಯೇ ಆಗಲಿಲ್ಲ! ಸುನಿಲ್ ಶೆಟ್ಟಿ ಹೀರೊ ಆಗಿದ್ದ ಈ ಸಿನಿಮಾದಲ್ಲಿ ಐಶ್ ಭಾರೀ ಕುಸುರಿಕೆಲಸಗಳುಳ್ಳ ಲೆಹಂಗಾ ತೊಟ್ಟು, ಜುಮ್ಕಿ, ಕಿವಿಯೋಲೆಗಳನ್ನು ಹಾಕಿ ಹಾಡೊಂದಕ್ಕೆ ಕುಣಿಯುವ ದೃಶ್ಯದ ಈ ಶೂಟಿಂಗ್ ವಿಡಿಯೊ ಆಕೆಯ ಕಣ್ಣು ಕುಕ್ಕುವ ಸೌಂದರ್ಯವನ್ನು ಎತ್ತಿ ತೋರಿಸುತ್ತಿದೆ. ವಾಸ್ತವವಾಗಿ ಅದಾಗಿ ಎಷ್ಟೋ ವರ್ಷಗಳ ನಂತರ ಶಾರೂಕ್ ಅಭಿನಯದ ಬನ್ಸಾಲಿ ನಿರ್ದೇಶನದ 'ದೇವದಾಸ್'ನಲ್ಲಿ ಐಶ್ ಇಂತಹದ್ದೇ ನೃತ್ಯವೊಂದಕ್ಕೆ ಹೆಜ್ಜೆ ಹಾಕಿ ಅದೂ ಸೂಪರ್‌ಹಿಟ್ ಆಗಿತ್ತು. ಆದರೆ ಈ 'ರಾಧೇಶ್ಯಾಮ್..' ಚಿತ್ರದ ಹಾಡಿನ ದೃಶ್ಯ ಅದಕ್ಕಿಂತಲೂ ಸುಂದರವಾಗಿ ಕಾಣುತ್ತಿರುವುದು ವಿಶೇಷ.

ಐಶ್ವರ್ಯ ರೈ ನಟಿಸಿದ ಚಿತ್ರವೊಂದು ತೆರೆಗೆ ಬಂದು ಎರಡು ವರ್ಷಗಳಾಗುತ್ತಾ ಬಂತು. 'ಫ್ಯಾನ್ನಿ ಖಾನ್' ಎಂಬ ಈ ಸಿನಿಮಾ ಬಾಕ್ಸ್‌ಆಫೀಸ್‌ನಲ್ಲಿ ಸುದ್ದಿ ಮಾಡಲಿಲ್ಲ. ಈಗ ಮಣಿರತ್ನಂ ಅವರ ಹೊಸ ಸಿನಿಮಾದಲ್ಲಿ ಐಶ್‌ಗೆ ಅತ್ಯುತ್ತಮ ಪಾತ್ರವೊಂದು ಸಿಕ್ಕಿದೆ. 'ಪೊನ್ನಿಯನ್ ಸೆಲ್ವನ್' ಸಿನಿಮಾದ ಚಿತ್ರೀಕರಣ ಭರದಿಂದ ನಡೆದಿದ್ದಾಗಲೇ ಕೊರೊನಾ ವಕ್ಕರಿಸಿದೆ. 'ಕಲ್ಕಿ ಕೃಷ್ಣಮೂರ್ತಿ ತಮಿಳಿನಲ್ಲಿ ಬರೆದ ಐತಿಹಾಸಿಕ/ಕಾಲ್ಪನಿಕ ಕಾದಂಬರಿ ಆಧರಿಸಿದ ಈ ಚಿತ್ರದಲ್ಲಿ ನಟಿಸಲು ಹೆಮ್ಮೆ ಆಗುತ್ತಿದೆ' ಎಂದು ಐಶ್ ಇತ್ತೀಚೆಗೆ ಹೇಳಿಕೊಂಡಿದ್ದಳು. ಅಂದಹಾಗೆ, ಈ ಚಿತ್ರದಲ್ಲಿ ಚೋಳ ಸಾಮ್ರಾಜ್ಯದ ಮಂತ್ರಿ ಮತ್ತು ಖಜಾಂಚಿ ಪಳುವೆಟ್ಟರೈಯರ್‌ನ ಪತ್ನಿಯ ಪಾತ್ರ ಐಶ್ವರ್ಯಳದ್ದಂತೆ. ಅಧಿಕಾರ ಆಕಾಂಕ್ಷೆಯ, ಪ್ರಬಲ ವ್ಯಕ್ತಿತ್ವದ ಮಹಿಳೆಯ ಪಾತ್ರವಂತೆ. ಮಂತ್ರಿಯ ಪಾತ್ರವನ್ನು ತೆಲುಗಿನ ಮೋಹನ್‌ಬಾಬು ನಟಿಸಿದ್ದಾರೆಂದು ಸುದ್ದಿ. ವಿಕ್ರಂ, ಜಯಂ ರವಿ, ಕೀರ್ತಿ ಸುರೇಶ್, ಅನುಷ್ಕಾ ಶೆಟ್ಟಿ ಮುಂತಾದವರ ದೊಡ್ಡ ತಾರಾಗಣವೇ ಈ ಚಿತ್ರದಲ್ಲಿದೆ. ಹಾಗೆ ನೋಡಿದರೆ ಮಣಿರತ್ನಂ ಐಶ್ವರ್ಯಳ ಗುರು. ಮಣಿ ನಿರ್ದೇಶಿಸಿದ ಎಂಜಿಆರ್–ಜಾನಕಿ–ಜಯಲಲಿತಾ ಕಥೆಯಿದ್ದ 'ಇರುವರ್' ಐಶ್ ನಟಿಸಿದ ಮೊದಲ ಚಿತ್ರ. ಈಗಲೂ ದೊಡ್ಡ ತಾರಾಗಣದ ಚಿತ್ರವಿದ್ದರೆ ಮಣಿ, ಐಶ್ವರ್ಯಳನ್ನು ನೆನಪಿಸಿಕೊಳ್ಳುವುದು ವಿಶೇಷ.

■ ಬಿಂದು

